ದಿಃ 17-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. **ಬಿ.ಟಿ.ಸಿ.** ಪ್ರತಿವಾದಿ **8** ರವರ ಪರ ವಕೀಲರಿಂದಃ

ನಿಪಿ-2 ಅನ್ನು ತೋರಿಸಲಾಗಿ ದಾವಾಸ್ತಿಯನ್ನು ಪ್ರತಿವಾದಿ 8 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಮಾಡಿರಬಹುದು ಆದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 8 ರವರನ್ನು ಯಾಕೆ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ಅಪ್ಪನ ಆಸ್ತಿ ನಮಗೆ ಬರಬೇಕಾಗಿರುವ ಕಾರಣ, ಈ ದಾವೆಯನ್ನು ಹೂಡಿರುತ್ತೇನೆ. ನಿಪಿ-2 ಅನ್ನು ನ್ಯಾಯಾಲಯಕ್ಕೆ ಯಾಕೆ ಹಾಜರು ಪಡಿಸಿದ್ದೀರಿ ಎಂದರೆ ದಾವಾಸ್ತಿ ನಮಗೆ ಬರಬೇಕು ಎಂದು ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-2 ರ ಪ್ರಕಾರ ಯಾರು ಪ್ರತಿವಾದಿ 8 ಕ್ಕೆ ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ನನ್ನ ಅಣ್ಣ-ಕೊಂಡಾರೆಡ್ಡಿ, ತಮ್ಮ-ನಂಜುಂಡರೆಡ್ಡಿ,ತಮ್ಮ-ರಾಮರೆಡ್ಡಿ ಮತ್ತು ಇಂದಿರಮ್ಮ ಮಾರಾಟ ಮಾಡಿರುತ್ತಾರೆ. ಇಂದಿರಮ್ಮ ರವರನ್ನು ಈ ದಾವೆಯನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲವೆಂದರೆ ಸರಿ. ನಿಪಿ-2 ರ ಪ್ರಕಾರ ನಂದೀಶ್ ಕುಮಾರ್ ಮತ್ತು ನಿತಿನ್ ಕುಮಾರ್ ಯಾರು ಎಂದರೆ ಕೊಂಡಾ ರೆಡ್ಡಿ ಮಕ್ಕಳು ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ನಂದೀಶ್ ಕುಮಾರ್ ಮತ್ತು ನಿತಿನ್ ಕುಮಾರ್ ಪಕ್ಷಗಾರರನ್ನಾಗಿ ಸೇರಿಸಿಲ್ಲವೆಂದರೆ ನನಗೆ ನೆನಪಿಲ್ಲ. ನಂದೀಶ್ ಕುಮಾರ್ ಮತ್ತು ನಿತಿನ್ ಕುಮಾರ್ ಪಕ್ಷಗಾರರನ್ನಾಗಿ ಈ ದಾವೆಯಲ್ಲಿ ಸೇರಿಸಿಲ್ಲವೆಂದರೆ ಸರಿ. ನಿಪಿ-2 ರ ಪ್ರಕಾರ ನಯನ ಮತ್ತು ವಿನಯ್ ಯಾರು ಎಂದರೆ ನಂಜುಂಡ ರೆಡ್ಡಿ ರವರ ಮಕ್ಕಳು. ನಯನ ಮತ್ತು ವಿನಯ್ ರವರನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲವೆಂದರೆ ಸರಿ. ಪ್ರತಿವಾದಿ 8 ರವರು ನಿಪಿ-2 ರ ಪ್ರಕಾರ ಆಸ್ತಿ ಖರೀದಿ ಮಾಡಿದ ನಂತರ ಏನು ವ್ಯವಸಾಯ ಮಾಡುತ್ತಿದ್ದರು ಎಂದರೆ ಜೋಳ ಬೆಳೆ ವ್ಯವಸಾಯ ಮಾಡುತ್ತಿದ್ದರು. ಇವಾಗ ಏನು ಬೆಳೆಯನ್ನು ಬೆಳೆಯುತ್ತಿದ್ದರು ಎಂದರೆ ನಾನು ಜಮೀನಿನ ಕಡೆ ಹೋಗಿಲ್ಲವೆಂದು ನುಡಿಯುತ್ತಾರೆ. ದಾವಾಸ್ತಿಯಲ್ಲಿ ಬೆಳೆಯನ್ನು

ಬೆಳೆಯುವುದಲ್ಲದೇ ವಿಧವಾದ ಮರಗಳು ಇದ್ದು, ಒಂದು ಕಟ್ಟಡ ಸಹಾ ಇದೆ ಎಂದರೆ ನಾನು ಜಮೀನಿನ ಕಡೆ ಹೋಗಿಲ್ಲವೆಂದು ನುಡಿಯುತ್ತಾರೆ. ಪ್ರತಿವಾದಿ 8 ದಾವಾಸ್ತಿಯ ಐಟಂ ನಂ. 1 ರಲ್ಲಿ ನಿಪಿ-2 ರ ಪ್ರಕಾರ ಖರೀದಿ ಮಾಡಿದ ದಿನದಿಂದ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ನಾನು ದಾವಾ ಹಾಕುವ ಸಮಯದಲ್ಲಿ ಐಟಂ ನಂ.1 ದಾವಾಸ್ತಿಯ ಬೆಲೆ ರೂ. 70,00,000/- ಗಳು ಇತ್ತು. ನಿಪಿ-2 ರ ಪ್ರಕಾರ ಪ್ರತಿವಾದಿ 8 ರವರರಿಗೆ ದಾವಾ ಸ್ವತ್ತನ್ನು ಕುಟುಂಬದ ಖರ್ಚಿಗಾಗಿ ಮತ್ತು ಕೈ ಸಾಲ, ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನಿಪಿ-2 ರ ಪ್ರಕಾರ ಪ್ರತಿವಾದಿ 8 ರವರರಿಗೆ ದಾವಾ ಸ್ವತ್ತನ್ನು ಕುಟುಂಬದ ಖರ್ಚಿಗಾಗಿ ಮತ್ತು ಕೈ ಸಾಲ, ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-2 ರ ಪ್ರಕಾರ ಪ್ರತಿವಾದಿ 8 ರವರಿಗೆ ಐಟಂ ನಂ.1 ದಾವಾ ಸ್ವತ್ತು ಖರೀದಿ ಮಾಡಿದ್ದಾರೆ ಎಂದು ನನಗೆ ಯಾವಾಗ ತಿಳಿಯಿತು ಎಂದರೆ ಮಾರಾಟ ಮಾಡಿದ 1 ವರ್ಷದ ನಂತರ ನನಗೆ ತಿಳಿದು ಬಂತು. ನನಗೆ ಮಾಹಿತಿ ಬಂದ ತಕ್ಷಣ ದಾವೆಯನ್ನು ಹೂಡಲು ತೊಂದರೆ ಇತ್ತಾ ಎಂದರೆ ಮಾಡೋಣಾ ಎಂದು ಅಂದುಕೊಂಡಿದೆ. ನನ್ನ ಮದುವೆಯಾಗಿ ಸುಮಾರು 36 ವರ್ಷ ಆಗಿದೆ. ದಾವಾ ಸ್ವತ್ತಿನಲ್ಲಿ ನಾವು ವ್ಯವಸಾಯ ಮಾಡುತ್ತಿರಲಿಲ್ಲವೆಂದರೆ ಸರಿ.

ನಿಪಿ-3 ಅನ್ನು ತೋರಿಸಲಾಗಿ ಐಟಂ ನಂ.2 ದಾವಾಸ್ತಿಯನ್ನು ಪ್ರತಿವಾದಿ 8 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಮಾಡಿರಬಹುದು ಆದರೆ ನನಗೆ ಗೊತ್ತಿಲ್ಲ. ನಿಪಿ-3 ಅನ್ನು ನ್ಯಾಯಾಲಯಕ್ಕೆ ಯಾಕೆ ಹಾಜರು ಪಡಿಸಿದ್ದೀರಿ ಎಂದರೆ ದಾವಾಸ್ತಿ ನಮಗೆ ಬರಬೇಕು ಎಂದು ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-3 ರ ಪ್ರಕಾರ ಯಾರು ಪ್ರತಿವಾದಿ 8 ಕ್ಕೆ ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ನನ್ನ ತಾಯಿ ಗೌರಮ್ಮ, ಅಣ್ಣ-ಕೊಂಡಾರೆಡ್ಡಿ , ತಮ್ಮ-ನಂಜುಂಡರೆಡ್ಡಿ,ತಮ್ಮ-ರಾಮರೆಡ್ಡಿ ಮಾರಾಟ ಮಾಡಿರುತ್ತಾರೆ.

ಪ್ರತಿವಾದಿ 8 ರವರು ನಿಪಿ-3 ರ ಪ್ರಕಾರ ಆಸ್ತಿ ಖರೀದಿ ಮಾಡಿದ ನಂತರ ಏನು ವ್ಯವಸಾಯ ಮಾಡುತ್ತಿದ್ದರು ಎಂದರೆ ಜೋಳ ಬೆಳೆ ವ್ಯವಸಾಯ ಮಾಡುತ್ತಿದ್ದರು. ಇವಾಗ ಏನು ಬೆಳೆಯನ್ನು ಬೆಳೆಯುತ್ತಿದ್ದರು ಎಂದರೆ ನಾನು ಜಮೀನಿನ ಕಡೆ ಹೋಗಿಲ್ಲವೆಂದು ನುಡಿಯುತ್ತಾರೆ. ದಾವಾಸ್ತಿಯಲ್ಲಿ ಬೆಳೆಯನ್ನು ಬೆಳೆಯುವುದಲ್ಲದೇ ವಿಧವಾದ ಮರಗಳು ಇದ್ದು, ಒಂದು ಕಟ್ಟಡ ಸಹಾ ಇದೆ ಎಂದರೆ ನಾನು ಜಮೀನಿನ ಕಡೆ ಹೋಗಿಲ್ಲವೆಂದು ನುಡಿಯುತ್ತಾರೆ. ಪ್ರತಿವಾದಿ 8 ದಾವಾಸ್ತಿಯ ಐಟಂ ನಂ. 2 ರಲ್ಲಿ  ನಿಪಿ-3 ರ ಪ್ರಕಾರ ಖರೀದಿ ಮಾಡಿದ ದಿನದಿಂದ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ನಾನು ದಾವಾ ಹಾಕುವ ಸಮಯದಲ್ಲಿ ಐಟಂ ನಂ.2 ದಾವಾಸ್ತಿಯ ಬೆಲೆ ರೂ. 70,00,000/- ಗಳು ಇತ್ತು. ನಿಪಿ-3 ರ ಪ್ರಕಾರ ಪ್ರತಿವಾದಿ 8 ರವರರಿಗೆ ದಾವಾ ಸ್ವತ್ತನ್ನು ಕುಟುಂಬದ ಖರ್ಚಿಗಾಗಿ ಮತ್ತು ಕೈ ಸಾಲ, ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನಿಪಿ-3 ರ ಪ್ರಕಾರ ಪ್ರತಿವಾದಿ 8 ರವರರಿಗೆ ದಾವಾ ಸ್ವತ್ತನ್ನು ಕುಟುಂಬದ ಖರ್ಚಿಗಾಗಿ ಮತ್ತು ಕೈ ಸಾಲ, ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-3 ರ ಪ್ರಕಾರ ಪ್ರತಿವಾದಿ 8 ರವರಿಗೆ ಐಟಂ ನಂ.2 ದಾವಾ ಸ್ವತ್ತು ಖರೀದಿ ಮಾಡಿದ್ದಾರೆ ಎಂದು ನನಗೆ ಯಾವಾಗ ತಿಳಿಯಿತು ಎಂದರೆ ಮಾರಾಟ ಮಾಡಿದ 1 ವರ್ಷದ ನಂತರ ನನಗೆ ತಿಳಿದು ಬಂತು.

ಐಟಂ ನಂ.2 ದಾವಾಸ್ತಿಯ ನನ್ನ ತಾಯಿಗೆ ಸರ್ಕಾರದಿಂದ ಮಂಜೂರಾಯಿತು ಎಂದರೆ ಸರಿ. ನಮ್ಮ ಊರಾದ ಕಲ್ಲಿನಾಯಕನಹಳ್ಳಿ ಅಲ್ಲಿ ಒಂದು ಮನೆ ಇತ್ತು ಎಂದರೆ ಸರಿ. ಮನೆಯ ವಿಸ್ತೀರ್ಣ ಹಾಗೂ ನಂಬರ್ ಗೊತ್ತಾ ಎಂದರೆ ಇಲ್ಲ. ನನ್ನ ತಂದೆ ವೆಂಕಟಪ್ಪ @ ವೆಂಕಟಯ್ಯ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲಾತಿಯನ್ನು ಹಾಜರು ಪಡಿಸಿದ್ದೀರಾ ಎಂದರೆ ಪಡಿಸಿರುತ್ತೇನೆ. ವೆಂಕಟಪ್ಪ @ ವೆಂಕಟಯ್ಯ ರವರ ಕುಟುಂಬಕ್ಕೆ ಸೇರಿಲ್ಲವೆಂದರೆ ಸರಿಯಲ್ಲ. ನಾನು ವೆಂಕಟಪ್ಪ @ ವೆಂಕಟಯ್ಯ ರವರ ಕುಟುಂಬಕ್ಕೆ ಸೇರದ

ಕಾರಣ ಆಸ್ತಿಯ ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ಅನ್ನು ಸೃಷ್ಟಿ ಮಾಡಿಸಿದ್ದೀರಿ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಎಲ್ಲಾ ದಾಖಲಾತಿಗಳನ್ನು ಸೃಷ್ಟಿ ಮಾಡಿ ಭಾಗ ಬರಬೇಕು ಎಂದು ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಹೆ.ಸಿ.ನ್ಯಾಮತ್ತು ಜೆಎಂಎಫ್‌ಸಿ,

ಗೌರಿಬಿದನೂರು